ಅಧ್ಯಕ್ಷರು.—ಉತ್ತರ ಕೇಳಿ.

(ಗೊಂದಲ)

ಶ್ರೀ ಎಂ. ಪಿ. ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೇ ಪ್ರತಿಶತ ೧೦ ರಷ್ಟು ಕೊಳವೆ ಬಾವಿಗಳು ವಿಫಲವಾಗಿರತಕ್ಕಂಥಾದ್ದು ಸ್ವಾಭಾವಿಕವಾಗಿ ಇರತಕ್ಕಂಥಾದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪ್ರಿಂಟೆಡ್ ಕ್ವೆಶ್ಚನ್‌ನಲ್ಲಿ ಏನಿದೆ ತಾವು ನೋಡಿ...

(ಗೊಂದಲ)

ಶ್ರೀ ಆರ್. ಎನ್. ನಾಯಕ್.—ನಿಮಗೆ ಈ ಇಲಾಖೆ ಹೊಸದು, ಅದಕ್ಕೆ ನೀವು ಉತ್ತರ ಕೊಡಲು ವಿಫಲರಾಗಿದ್ದೀರಿ...

ಅಧ್ಯಕ್ಷರು.—ನಾಯ್ಕರೇ ನೀವು ಪರ್ಮಿಶನ್ ಇಲ್ಲದೆ ಮಧ್ಯೆ ಮಧ್ಯೆ ಎದ್ದು ನಿಂತು ಮಾತನಾಡುವುದು ಸರಿಯಲ್ಲ. ನೀವು ನಿಯಮಗಳನ್ನೆಲ್ಲಾ ಗಾಳಿಗೆ ತೂರುತ್ತಿದ್ದೀರಿ.

(ಗೊಂದಲ)

ಅಧ್ಯಕ್ಷರು.—ನೀವೇನೇನು ಮಾತನಾಡಿದ್ದೀರೋ ಅದನ್ನೆಲ್ಲಾ ನಾನು ಎಕ್ಸಪಂಜ್ ಮಾಡುತ್ತೇನೆ. ಈಗ ಇದೇ ರೀತಿ ಮಾಡಿದರೆ ಮುಂದಿನ ಪ್ರಶ್ನೆಗೆ ಹೋಗಬೇಕಾಗುತ್ತದೆ.

ಶ್ರೀ ಆರ್. ಎನ್. ನಾಯಕ್.—ನಾನು ಸಮುಚಿತ್ತ ಕಳೆದುಕೊಂಡಿದ್ದೇನೆಯೇ...

ಶ್ರೀ ಎಂ. ಪಿ. ಪ್ರಕಾಶ್.—ಕಣ್ಣು, ಹೃದಯ ಕಳೆದುಕೊಂಡಿರತಕ್ಕಂಥ ಸರ್ಕಾರ ಇಲ್ಲಿ ಇದೆಯೇ?

(ಗೊಂದಲ)

ಅಧ್ಯಕ್ಷರು.—ಪ್ರಶ್ನೆ ಮುಂದಕ್ಕೆ ಹಾಕುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಕುಳಿತುಕೊಳ್ಳಿ.

ಅಧ್ಯಕ್ಷರು.—ತಾವು ಕುಳಿತುಕೊಳ್ಳಿ. ಈರೀತಿ ನೀವು ಮಾತನಾಡಿದರೆ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಆರ್. ಎನ್. ನಾಯಕ್.—ಮಾನ್ಯ ಪ್ರಕಾಶ್‌ರವರು ಯಾವಾಗಲೂ ಸಮಾಧಾನದಿಂದ ಇರುವವರು, ಯಾವಾಗಲೂ ನಗುನಗುತ್ತಾ ಇರುವವರು. ಇವತ್ತು ಇವರು ಏಕೆ ಹೀಗೆ ಕೋಪ ಮಾಡಿಕೊಂಡಿದ್ದಾರೆ ?

ಶ್ರೀ ಎಂ. ಪಿ. ಪ್ರಕಾಶ್.—ಪ್ಲಾನಿವೆಂಟರಿ ಪ್ರೊಸೀಜರ್‌ನಲ್ಲಿ, ಸದಸ್ಯರು ಯಾವ ರೀತಿಯಾಗಿ ಪದ ಬಳಕೆ ಮಾಡುತ್ತಾರೋ ಅದೇ ಧಾಟಿಯಲ್ಲಿ ಸ್ವೀಕಾರ ಮಾಡಬೇಕು. ಎಲ್ಲವನ್ನೂ ಕ್ರೀಡಾ ಮನೋಭಾವದಿಂದ ತಿಳಿದುಕೊಳ್ಳಬೇಕು. ನೀವು ಈ ಸರ್ಕಾರ ಕಣ್ಣು ಮೂಗು ಕಳೆದುಕೊಂಡಿದೆ ಎಂದು ಹೇಳಿದ್ದಕ್ಕೆ ನಾನು ಅಸಮುಚಿತ್ತ ಸದಸ್ಯರು ಎಂದು ಹೇಳಿದೆ. ಆದರೆ ಅದಕ್ಕೆ ಗಂಟು ಮುಖ ಹಾಕಿಕೊಳ್ಳುವುದಕ್ಕೆ ಇದರಲ್ಲಿ ಅಂಥಾದ್ದು ಏನೂ ಇಲ್ಲ.

ಅಧ್ಯಕ್ಷರು.—ನೋಡಿ ಬಂದು ಗಾದೆ ಇದೆ, ''ಅಂದು ಆನ್ನಿಸಿಕೊಂಡ ಚೆಂದ ಗೇಡಿ'' ಅಂತ, ನೀವು ಇವರಿಗೆ ಏನೂ ಅನ್ನಬೇಡಿ. ಅವರೂ ನಿಮಗೆ ಏನೂ ಅನ್ನುವುದು ಬೇಡ.

ನಗರಸಭೆಯಿಂದ ಹೊಸದಾಗಿ ಲೇಔಟ್ ಮಾಡಿಸಿದವರಿಗೆ ಆಗುತ್ತಿರುವ ತೊಂದರೆ

೧೯೭೨ ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನಗರಸಭೆಗಳಡಿಯಲ್ಲಿ ಹೊಸದಾಗಿ ನಿರ್ಮಾಣ ಮಾಡುವ ಬಡಾವಣೆಗಳಿಗೆ ಅಭಿವೃದ್ಧಿ ಶುಲ್ಕವನ್ನು ಪಾವತಿ ಮಾಡಿದಾಗ್ಯೂ ಸದರಿ ಬಡಾವಣೆಗಳಿಗೆ ಅಭಿವೃದ್ಧಿ ಕಾರ್ಯಗಳನ್ನು ಮಾಡದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ,

ಅ) ಶುಲ್ಕವನ್ನು ಪಾವತಿ ಮಾಡಿರುವ ಸಾರ್ವಜನಿಕರಿಗೆ ಅಭಿವೃದ್ಧಿ ಕಾರ್ಯಗಳನ್ನು ಮಾಡಿ ಕೊಡುವಲ್ಲಿ ಸರ್ಕಾರವು ಕ್ರಮ ಕೈಗೊಳ್ಳುವುದೇ,

ಇ) ಅಕ್ರಮ ಕಟ್ಟಡಗಳ ನಿರ್ಮಾಣದಿಂದ ನಗರದ ನೈರ್ಮಲ್ಯ ಹಾಳಾಗದಂತೆ ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಶ್ರೀ ಎಂ. ಚಂದ್ರಶೇಖರ್, (ನಗರಾಭಿವೃದ್ಧಿ ಸಚಿವರು).—

ಅ) ಇಲ್ಲ

ಆ) ಮೇಲೆ ಕೊಟ್ಟಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ. ಯಾವುದಾದರೂ ನಿರ್ದಿಷ್ಟ ಪ್ರಕರಣಗಳನ್ನು ಸರ್ಕಾರದ ಗಮನಕ್ಕೆ ತಂದರೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಇ) ಮಹಾನಗರಪಾಲಿಕೆ ನಗರ, ಪುರಸಭೆ, ಯೋಜನಾ ಪ್ರಾಧಿಕಾರ, ಅಭಿವೃದ್ಧಿ ಮಂಡಳಿ ಮುಂತಾದ ಶಾಸನಬದ್ಧ ಪ್ರಾಧಿಕಾರಗಳಿಗೆ ಪಟ್ಟಣ ಪ್ರದೇಶಗಳಲ್ಲಿ ಅನಧಿಕೃತ ಕಟ್ಟಡಗಳು ತಲೆಯೆತ್ತದಂತೆ ನೋಡಿಕೊಳ್ಳುವ ಕರ್ತವ್ಯವನ್ನು ಸರ್ಕಾರವು ವಹಿಸಿಕೊಟ್ಟಿದೆ. ಅನಧಿಕೃತ ಕಟ್ಟಡಗಳು ತಲೆ ಎತ್ತದಂತೆ ನೋಡಿಕೊಳ್ಳುವುದು ಈ ಪ್ರಾಧಿಕಾರಗಳ ಕರ್ತವ್ಯವಾಗಿದೆ. ಅವುಗಳಿಗೆ ಸೂಕ್ತ ತಿಳುವಳಿಗೆ ನೀಡಲಾಗುವುದು.

ಶ್ರೀ ಐ. ಬಿ. ಶಂಕರ್.—ಸನ್ಮಾನ್ಯ ಅಧ್ಯಕ್ಷರೇ, ನಾನು ಕೇಳಿರುವ ಮೊದಲನೇ ಪ್ರಶ್ನೆಗೆ ಇಲ್ಲವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಒಂದು ಸೈಟಿಗೆ ಅಭಿವೃದ್ಧಿ ಶುಲ್ಕವೆಂದು ೫ ಅಥವಾ ೬ ಸಾವಿರ ರೂಪಾಯಿಗಳನ್ನು ಪಡೆದುಕೊಳ್ಳುತ್ತಾರೆ. ಆದರೆ, ಇದುವರೆಗೂ ಒಂದು ಸಣ್ಣ ಚರಂಡಿಯನ್ನೂ ಅಲ್ಲಿ ಮಾಡಿಲ್ಲ. ನೀರಿನ ವ್ಯವಸ್ಥೆ ಮಾಡಿಕೊಟ್ಟಿಲ್ಲ, ರೋಡುಗಳನ್ನು ಮಾಡಿಲ್ಲ. ಗಲೀಜು ನೀರು ಹೋಗುವುದಕ್ಕೆ ಚರಂಡಿ ವ್ಯವಸ್ಥೆ ಮಾಡಿಲ್ಲ. ಹೀಗಾಗಿ ಅಲ್ಲಿ ಸೊಳ್ಳೆಗಳ ಕಾಟ ಕೂಡ ಜಾಸ್ತಿಯಾಗಿದೆ. ಅಭಿವೃದ್ಧಿ ಕೆಲಸಗಳನ್ನು ಮಾಡುವುದಕ್ಕಾಗದಿದ್ದರೆ ಸೈಟುಗಳವರಿಂದ ಅಭಿವೃದ್ಧಿ ಶುಲ್ಕವನ್ನು ಪಡೆದುಕೊಳ್ಳುವುದನ್ನು ಸರ್ಕಾರ ನಿಲ್ಲಿಸಬೇಕು. ಅಭಿವೃದ್ಧಿ ಶುಲ್ಕವನ್ನು ಪಡೆದು ಕೊಂಡರೆ ಅದಕ್ಕೆತಕ್ಕಂತೆ ಅನುಕೂಲಗಳನ್ನು ಮಾಡಿಕೊಡಬೇಕು. ಆಮೇಲೆ ಎರಡನೆಯದಾಗಿ ಅಕ್ರಮ ಕಟ್ಟಡಗಳ ನಿರ್ಮಾಣದ ಬಗ್ಗೆ ಹೇಳಿದ್ದಾರೆ. ಸ್ವಾಮಿ, ನಿರ್ಮಿ ಅಧಿಕಾರಿಗಳು ಏನು ಮಾಡುತ್ತಾರೆ ಎಂದರೆ, ಚರಂಡಿ ಮೇಲೆಲ್ಲಾ ಮನೆ ಕಟ್ಟುವುದಕ್ಕೆ ಬಿಟ್ಟು ಬಿಡುತ್ತಾರೆ. ಅರ್ಧ ಮನೆ ಕಟ್ಟುವ ವರೆಗೂ ಸುಮ್ಮನೆ ಇದ್ದು ಆ ಮೇಲೆ ನೋಟೀಸ್ ಕೊಡುತ್ತಾರೆ, ಅನಧಿಕೃತವಾಗಿ ಮನೆಗಳನ್ನು ಕಟ್ಟುವ ಕೆಲಸವನ್ನು ಪ್ರಾರಂಭದಲ್ಲೇ ತಡೆಯುವ ಕೆಲಸವನ್ನು ಏಕೆ ಮಾಡುವುದಿಲ್ಲ. ಚಿಕ್ಕಮಗಳೂರು ಟೌನಿನಲ್ಲಿ ಇರುವ ರಸ್ತೆಗಳಲ್ಲಿ ಎರಡು ವೆಹಿಕಲ್‌ಗಳು ಎದುರುಬದರು ಬಂದರೆ ಚರಂಡಿ ಪಕ್ಕದಲ್ಲೂ ನಿಲ್ಲುವುದಕ್ಕೆ ಸ್ಥಳ ಇಲ್ಲದಂತೆ ಆಗಿದೆ. ಅನಧಿಕೃತವಾಗಿ ಮನೆಗಳನ್ನು ಕಟ್ಟುವುದಕ್ಕೆ ಅವಕಾಶ ಕೊಟ್ಟಿರುವ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ? ಆ ಮೇಲೆ ಮೂರನೆಯದಾಗಿ ಯಾವುದಾದರೂ ಸ್ಪೆಸಿಫಿಕ್ ಆಗಿ ಇಂಥ ಕಡೆ ನೈರ್ಮಲ್ಯ ಕೆಲಸಗಳು ಆಗಿಲ್ಲವೆಂದು ಹೇಳಿದರೆ ಅಂಥ ಕಡೆ ಕೆಲಸಗಳನ್ನು ಮಾಡಿಸಿಕೊಡಲಾಗುತ್ತದೆಂದು ಮಾನ್ಯ ಮಂತ್ರಿಯವರು ಹೇಳಿದ್ದಾರೆ. ನಮ್ಮ ಚಿಕ್ಕಮಗಳೂರಿನ ಗೌರಿಕಾವಲ್, ಶಂಕರಪುರ ಮತ್ತು ಕೋಟೆ ಈ ಮೂರು ಬಡಾವಣೆಗಳಲ್ಲಿ ವಿಶೇಷವಾಗಿ ಅಧಿಕಾರಿಗಳು ಗಮನ ಕೊಟ್ಟು ಕೆಲಸ ಮಾಡಿಸಬೇಕೆಂದು ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಚಿಕ್ಕಮಗಳೂರಿನಲ್ಲಿ ಇದುವರೆಗೆ ಯೋಜನಾ ಪ್ರಾಧಿಕಾರ ಮಾತ್ರ ಇದ್ದಿದ್ದು. ನಗರಾಭಿವೃದ್ಧಿ ಮಂಡಳಿ ಇರಲಿಲ್ಲ. ಆದ್ದರಿಂದ ಅಭಿವೃದ್ಧಿ ಕಾರ್ಯಗಳನ್ನು ಮುನಿಸಿಪಾಲಿಟಿಯವರೇ ಮಾಡುತ್ತಿದ್ದರು. ನಗರ ಯೋಜನಾ ಪ್ರಾಧಿಕಾರದ ಮುಖಾಂತರ ಮಂಜೂರಾತಿ ಪಡೆದು ಲೆ-ಔಟ್‌ಗಳನ್ನು ಮಾಡಿದಿದ್ದರೆ ಎಲ್ಲಾ ಅನುಕೂಲಗಳನ್ನು ಒದಗಿಸಿಕೊಡ ಬಹುದಾಗಿತ್ತು. ಅನಧಿಕೃತವಾಗಿ ಮುನಿಸಿಪಾಲಿಟಿ ಏರಿಯಾದೊಳಗೆ ಕಟ್ಟಿರುವ ಮನೆಗಳವರಿಂದ ಮತ್ತು ಸೈಟುಗಳವರಿಂದ ಅಭಿವೃದ್ಧಿ ಶುಲ್ಕವನ್ನು ವಸೂಲಿ ಮಾಡಿ ಕೆಲಸಗಳನ್ನು ಮಾಡಿಲ್ಲವೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಮಾನ್ಯ ಸದಸ್ಯರು ತಿಳಿಸಿರುವ ವಿಷಯಗಳ ಬಗ್ಗೆ ಮಾಹಿತಿಗಳನ್ನು ಪಡೆದು ಸೂಕ್ತ ನಿರ್ದೇಶನವನ್ನು ಕೊಡುತ್ತೇನೆ. ಈಗ ನಗರದಲ್ಲಿ ಪ್ರಾಧಿಕಾರದ ರಚನೆಯಾಗಿದೆ.

ಯೋಜನಾ ಪ್ರಾಧಿಕಾರ ಮತ್ತು ನಗರಾಭಿವೃದ್ಧಿ ಮಂಡಳಿ. ಇವೆರಡೂ ಜಿಲ್ಲಾಧಿಕಾರಿಗಳಿವರ ನೇತೃತ್ವದಲ್ಲಿ ಕೆಲಸ ಮಾಡುವಂತಹ ಪ್ರಾಧಿಕಾರಗಳು ರಚಿಸಲ್ಪಟ್ಟಿವೆ. ಅವರು ನಗರಾಭಿವೃದ್ಧಿ ವಿಷಯಗಳ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಐ. ಬಿ. ಶಂಕರ್.—ಅಲ್ಲಿಯ ಅಧಿಕಾರಿಗಳು ಯಾವುದೋ ಆಮಿಷಗಳಿಗೆ ಒಳಗಾಗಿ ಚರಂಡಿಗಳ ಮೇಲೆ ಅನಧಿಕೃತವಾಗಿ ಮನೆ ಕಟ್ಟಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಇಂತಹ ಪ್ರಕರಣಗಳಿಗೆ ಅವಕಾಶ ಮಾಡಿಕೊಟ್ಟ ಅಧಿಕಾರಿಗಳ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ ?

ಶ್ರೀ ಎಂ ಚಂದ್ರಶೇಖರ್.— ಮಾನ್ಯ ಸದಸ್ಯರು ವ್ಯಕ್ತಪಡಿಸಿದ ವಿಚಾರಗಳ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಒಂದು ವರದಿಯನ್ನು ಕಳುಹಿಸಿಕೊಡುವಂತೆ ತಿಳಿಸುತ್ತೇನೆ. ಇಂತಹ ಅಕ್ರಮಗಳ ಕಾಲದಲ್ಲಿ ಅಲ್ಲಿ ಯಾರ್ಯಾರು ಅಧಿಕಾರಿಗಳು ಇದ್ದರು ಎಂದು ತಿಳಿದುಕೊಂಡು ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ಗೃಹ ಮಂಡಳಿಯಿಂದ ಕಟ್ಟಿಸಿದ ಮನೆಗಳು

೧೮೨೦. ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ವಸತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕರ್ನಾಟಕ ಗೃಹ ಮಂಡಳಿಯವರು ಈವರೆಗೆ ನಿರ್ಮಿಸಿದ ಮನೆಗಳೆಷ್ಟು ?

ಆ) ನೂತನವಾಗಿ ಮನೆಗಳನ್ನು ನಿರ್ಮಿಸುವ ಯೋಜನೆ ಮಂಡಳಿಯ ಉದ್ದೇಶವಿದೆಯೇ ?

ಇ) ಹಾಗಿದ್ದಲ್ಲಿ ಈ ಮನೆಗಳೆಷ್ಟು ? ಮತ್ತು ನಿರ್ಮಾಣ ಮಾಡುವ ಸ್ಥಳಗಳಾವುವು ?

ಶ್ರೀ ಮೊಹಮ್ಮದ್ ಮೊಯಿನುದ್ದೀನ್ (ವಸತಿ ಸಚಿವರು).—

ಅ) ೧೭೬೨.

ಆ) ನೂತನವಾಗಿ ಮನೆಗಳನ್ನು ನಿರ್ಮಿಸುವ ಯೋಜನೆ ಮಂಡಳಿಗಿದೆ.

ಇ) ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳದಲ್ಲಿ ೪೫ ಮನೆಗಳನ್ನು ವಿವಿಧ ವರ್ಗಗಳ ಜನರಿಗಾಗಿ ನಿರ್ಮಿಸುವ ಉದ್ದೇಶವಿದೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಮಾನ್ಯ ಅಧ್ಯಕ್ಷರೇ, ನಾನು ಕೇಳಿದ "ಅ" ಪ್ರಶ್ನೆಗೆ ಮಾನ್ಯ ಸಚಿವರು ೧೭೬೨ ಮನೆಗಳನ್ನು ನಿರ್ಮಿಸಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಹಾಗಿದ್ದಲ್ಲಿ, ಈ ೧೭೬೨ ಮನೆಗಳಲ್ಲಿ ಸ್ವಾಧೀನ ಹೊಂದಿರತಕ್ಕಂಥ ಫಲಾನುಭವಿಗಳ ಸಂಖ್ಯೆ ಎಷ್ಟು? ಮತ್ತು ಹಾಗೆಯೇ ಬಿಟ್ಟಿರತಕ್ಕಂಥ ಮನೆಗಳ ಸಂಖ್ಯೆ ಎಷ್ಟು ?

ಶ್ರೀ ಮೊಹಮ್ಮದ್ ಮೊಯಿನುದ್ದೀನ್.—ಈ ೧೭೬೨ ಮನೆಗಳನ್ನು ಸಂಪೂರ್ಣವಾಗಿ ಫಲಾನುಭವಿಗಳಿಗೆ ಕೊಡಲಾಗಿದೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ.—ಮಾನ್ಯ ಸಚಿವರು ಹೇಳುವಂಥ ವಿಚಾರವು ಸತ್ಯಕ್ಕೆ ತುಂಬಾ ದೂರವಾದುದು ಎಂದು ಹೇಳಬೇಕಾಗುತ್ತದೆ. ಅವರಲ್ಲಿ ಪೂರ್ಣ ಮಾಹಿತಿಯು ಇಲ್ಲ ಎಂದೂ ಕಾಣುತ್ತದೆ. ಅಲ್ಲಿ ಬೇರೆ ಬೇರೆ ಕಾರಣಗಳಿಗೋಸ್ಕರ ಅಂದರೆ, ನೀರಿನ ವ್ಯವಸ್ಥೆ ಇಲ್ಲದಿರುವುದೂ, ವಿದ್ಯುತ್‌ಚ್ಛಕ್ತಿ ವ್ಯವಸ್ಥೆ ಇಲ್ಲದಿರುವುದು, ಚರಂಡಿವ್ಯವಸ್ಥೆ ಇಲ್ಲದಿರುವುದು ಮುಂತಾಗಿ ನಾನಾ ಕಾರಣಗಳಿಗಾಗಿ ಆ ಮನೆಗಳಲ್ಲಿ ಕೆಲವು ಮನೆಗಳು ಖಾಲಿ ಇವೆ ಎಂದು ತಿಳಿದುಬರುತ್ತದೆ. ಆದುದರಿಂದ ಸಚಿವರು ಕೊಟ್ಟ ಉತ್ತರ ಸರಿಯಾಗಿಲ್ಲ ಎಂದು ಹೇಳಬಯಸುತ್ತೇನೆ.

ಶ್ರೀ ಮಹಮದ್ ಮೊಯಿನುದ್ದೀನ್.—ಅಲ್ಲಿಯ ೧೭೬೨ ಮನೆಗಳಲ್ಲಿ ಎಲ್ಲಾ ಮನೆಗಳೂ ಅಲಾಟ್ ಆಗಿವೆ. ಅಲಾಟ್ ಆದವರು ಅಕ್ಯುಪೈ ಮಾಡಿಕೊಳ್ಳುತ್ತಾರೆ. ಆದರೆ ಅಲಾಟ್ ಆದವರಲ್ಲಿ ಕೆಲವರು ಸ್ವಂತ ಕಾರಣಕ್ಕಾಗಿ ಅಕ್ಯುಪೈ ಮಾಡಿಕೊಳ್ಳದಿರಬಹುದು ಎಂದು ಕಾಣುತ್ತದೆ.